**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1336 |
| ಮಾನ್ಯ ಸದಸ್ಯರ ಹೆಸರು: | ಶ್ರೀ ಗಣಪತಿ ದುಮ್ಮಾ ಉಲ್ವೇಕರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | 16.03.2026 |
| ಉತ್ತರಿಸುವ ಸಚಿವರು: | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನಲ್ಲಿ ಅಪಘಾತದಲ್ಲಿ ಗಾಯಗೊಂಡಿದ್ದ ವ್ಯಕ್ತಿ ಚಿಕಿತ್ಸೆಗಾಗಿ 600 ಕಿಲೋ ಮೀಟರ್ ಅಲೆದು ಐದು ಆಸ್ಪತ್ರೆಗಳಿಗೆ ಹೋದರೂ ಚಿಕಿತ್ಸೆ ಸಿಗದೇ ಅಂಬ್ಯುಲೆನ್ಸ್‌ನಲ್ಲಿ ಮೃತಪಟ್ಟ ವಿಷಯ ದಿನಾಂಕ: 30.10.2025ರ ಪತ್ರಿಕೆಯಲ್ಲಿ ಪ್ರಕಟವಾಗಿದೆ; ಈ ಘಟನೆಯು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ; ಮಾಹಿತಿ ಒದಗಿಸುವುದು. | ಬಂದಿದೆ.<br>ದಿನಾಂಕ: 27.10.2025 ರಂದು ಅಪಘಾತಕ್ಕೀಡಾದ ಅಂಕೋಲಾ ತಾಲ್ಲೂಕಿನ ಬೋಳೆ ಗ್ರಾಮದ ದಲಿತ ಕುಟುಂಬದ ಶ್ರೀ ಚಂದ್ರಹಾಸ ಆಗೇರ್, ಇವರು ಮೃತಪಟ್ಟಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ, ತನಿಖೆ ನಡೆಸಿ ವರದಿ ನೀಡಲು ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿಗಳು, ಉತ್ತರ ಕನ್ನಡ ಮತ್ತು ಜಿಲ್ಲಾ ಸಂಯೋಜಕರು ABARK, ಉತ್ತರ ಕನ್ನಡ, ಕಾರವಾರ, ಇವರಿಗೆ ಸೂಚಿಸಲಾಗಿದೆ. ತನಿಖಾಧಿಕಾರಿಯಿಂದ ಸ್ವೀಕೃತವಾದ ವರದಿಯು ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಇವರ ಪರಿಶೀಲನೆಯಲ್ಲಿರುತ್ತದೆ. |
| (ಆ) | ಇದೇ ಪ್ರಕರಣದಲ್ಲಿ ಜಿಲ್ಲಾ ಆಸ್ಪತ್ರೆಯ ಶಿಫಾರಸ್ಸಿನಂತೆ ಉನ್ನತ ಆಸ್ಪತ್ರೆಗೆ ರೋಗಿಯನ್ನು ಸಾಗಿಸಲು ಸರ್ಕಾರಿ ಅಂಬ್ಯುಲೆನ್ಸ್ ಡೀಸೆಲ್ / ಪೆಟ್ರೋಲ್ ಖರ್ಚನ್ನು ರೋಗಿ ಅಥವಾ ಗಾಯಾಳುವಿನ ಕಡೆಯವರಿಂದಲೇ ಪಡೆಯಲಾಗಿದ್ದು, ಇಂಧನ ಖರ್ಚು ಕೊಡುವುದು ಕಡ್ಡಾಯವೇ; ಪರಿಶಿಷ್ಟ ವರ್ಗದವರಿಗೂ ಇದು ಅನ್ವಯವೇ; | ಬಡತನ ರೇಖೆಗಿಂತ ಕೆಳಗಿರುವ ಬಡ ರೋಗಿಗಳನ್ನು ತುರ್ತು ಸಂದರ್ಭಗಳಲ್ಲಿ ಸರ್ಕಾರಿ ತುರ್ತು ವಾಹನಗಳಲ್ಲಿ(Ambulances) ಉಚಿತವಾಗಿ ಕರೆದೊಯ್ಯಬಹುದು ಮತ್ತು ಈ ರೀತಿ ಉಚಿತವಾಗಿ ಕರೆದೊಯ್ಯಲು ಅನುಮತಿ ನೀಡುವ ಅಧಿಕಾರವನ್ನು ಆಸ್ಪತ್ರೆಯ ಮುಖ್ಯಸ್ಥರಿಗೆ ನೀಡಲಾಗಿರುತ್ತದೆ.<br>ಶ್ರೀ ಚಂದ್ರಹಾಸ ಅಗೇರ್, ಎಂಬ ರೋಗಿಗೆ ದಿನಾಂಕ: 27.10.2025 ರಂದು ಅಂಕೋಲಾ ತಾಲೂಕು ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗದಲ್ಲಿ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಅಂಕೋಲಾ ತಾಲ್ಲೂಕು ಆಸ್ಪತ್ರೆಯ ಅಂಬ್ಯುಲೆನ್ಸ್ ಮುಖಾಂತರ ಉಚಿತವಾಗಿ ಕ್ರಿಮ್ಸ್ ಆಸ್ಪತ್ರೆ ಕಾರವಾರಕ್ಕೆ ರೆಫರಲ್ ಮಾಡಲಾಗಿರುತ್ತದೆ. ತಾಲೂಕು ಆಸ್ಪತ್ರೆ ಅಂಕೋಲಾದಲ್ಲಿ ಚಂದ್ರಹಾಸ ರೋಗಿ ಅಥವಾ ರೋಗಿಯ ಸಹಚರರಿಂದ ಅಂಬ್ಯುಲೆನ್ಸ್ ಶುಲ್ಕ ಪಡೆದಿರುವುದಿಲ್ಲ, ಪರಿಶಿಷ್ಟ ವರ್ಗದವರಿಗೆ ಯಾವುದೇ ರೀತಿಯ ಆಸ್ಪತ್ರೆಯ ಶುಲ್ಕಗಳಿರುವುದಿಲ್ಲ. |

| | | |
|---|---|---|
| | | ಆದರೆ, ಕಾರವಾರ ವೈದ್ಯಕೀಯ ವಿಜ್ಞಾನಗಳ ಬೋಧಕ ಆಸ್ಪತ್ರೆಯಲ್ಲಿ ರೋಗಿಗಳನ್ನು ಸಾಗಿಸಲು ಇರುವ ಅಂಬುಲೆನ್ಸ್ ಡೀಸೆಲ್ / ಪೆಟ್ರೋಲ್ ಖರ್ಚನ್ನು ರೋಗಿ ಅಥವಾ ಗಾಯಾಳುವಿನ ಕಡೆಯವರಿಂದಲೇ ಪಡೆಯಲಾಗಿದೆ. ವಾಹನ ಚಾಲಕರು ಮತ್ತು ಅಂಬ್ಯುಲೆನ್ಸ್ ಗಳು ಉಚಿತವಾಗಿರುತ್ತದೆ. ಪರಿಶಿಷ್ಟ ಜಾತಿ – ಪರಿಶಿಷ್ಟ ಪಂಗಡದವರಿಗೆ ಪೆಟ್ರೋಲ್ ಖರ್ಚನ್ನು ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಯೋಜನೆಯಡಿಯಲ್ಲಿ ಸೂಕ್ತ ದಾಖಲಾತಿಗಳನ್ನು ನೀಡಿದರೆ ಮಾತ್ರ ಭರಿಸಲಾಗುವುದು. ಸದರಿ ಪ್ರಕರಣದಲ್ಲಿ ರೋಗಿಯ ಸಂಬಂಧಿಕರು ಪರಿಶಿಷ್ಟ ವರ್ಗಕ್ಕೆ ಸೇರಿದ ಸೂಕ್ತ ದಾಖಲೆಗಳನ್ನು ನೀಡದೇ ಇದ್ದ ಕಾರಣ ಪೆಟ್ರೋಲ್ ಖರ್ಚನ್ನು ವಸೂಲಿ ಮಾಡಲಾಗಿತ್ತು. ಅವರು ಸರಿಯಾದ ದಾಖಲೆಗಳನ್ನು ನೀಡಿದ್ದರೆ ಅವರಿಗೆ ಪೆಟ್ರೋಲ್ ಖರ್ಚನ್ನು ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಯೋಜನೆಯಡಿಯಲ್ಲಿ ಭರಿಸಲಾಗುತ್ತಿತ್ತು ಎಂದು ಡೀನ್ ಹಾಗೂ ನಿರ್ದೇಶಕರು, ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಇವರು ತಿಳಿಸಿರುತ್ತಾರೆ. |
| (ಇ) | ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾರವಾರ ವೈದ್ಯಕೀಯ ವಿಜ್ಞಾನ ಸಂಸ್ಥೆಯಿಂದ ಕಳೆದ ಒಂದು ವರ್ಷದಲ್ಲಿ ಎಷ್ಟು ಗಾಯಾಳು, ರೋಗಿಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಉನ್ನತ ಆಸ್ಪತ್ರೆಗಳಿಗೆ ಶಿಫಾರಸ್ಸು ಮಾಡಲಾಗಿದೆ; ಹೀಗೆ ಶಿಫಾರಸ್ಸಾದವರ ಪೈಕಿ ಮೃತಪಟ್ಟವರು ಎಷ್ಟು? (ಸಂಪೂರ್ಣ ವಿವರ ಒದಗಿಸುವುದು) | ಡೀನ್ ಹಾಗೂ ನಿರ್ದೇಶಕರು, ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಇವರು ಉತ್ತರ ಕನ್ನಡ ಜಿಲ್ಲೆಯಲ್ಲಿ ಶಿಫಾರಸ್ಸು ಮಾಡಲಾದ ವಿವರಗಳು ಈ ಕೆಳಕಂಡಂತಿವೆ ಎಂದು ತಿಳಿಸಲಾಗಿದೆ |

| Month | Referred on cases | From Casualty referred out cases | From wards referred out cases |
|---|---|---|---|
| Jan-25 | 211 | 08 | 42 |
| Feb-25 | 227 | 25 | 57 |
| Mar-25 | 205 | 12 | 59 |
| Apr-25 | 239 | 14 | 56 |
| May -25 | 165 | 10 | 49 |
| June-25 | 157 | 09 | 32 |
| July-25 | 213 | 15 | 68 |
| Aug-25 | 256 | 16 | 66 |
| Sep-25 | 221 | 14 | 63 |
| Oct-25 | 218 | 15 | 76 |
| Nov-25 | 214 | 29 | 60 |
| Dec-25 | 223 | 27 | 44 |
| Total | 2549 | 194 | 672 |

ಆಕುಕ 38 ಎಸ್‌ಬಿವಿ 2026

(ದಿನೇಶ್ ಗುಂಡೂರಾವ್)

ಆರೋಗ್ಯ & ಕುಟುಂಬ ಕಲ್ಯಾಣ ಸಚಿವರು